: (ಕ): 0821-2419288/255
E-mail: dir.deptofphyedn@gmail.com

ಮೈಸೂರು ವಿಶ್ವವಿದ್ಯಾನಿಲಯ

**ದೈಹಿಕ ಶಿಕ್ಷಣ ವಿಭಾಗ, ಸ್ಪೋರ್ಟ್ಸ್ ಪೆವಿಲಿಯನ್ , ಮೈಸೂರು-05**

(4.0 ಸ್ಕೇಲ್‌ನ 3.01 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)

(ಎನ್‌ಐಆರ್‌ಎಫ್-2022 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 54ನೇ ಸ್ಥಾನ)

ಸಂಖ್ಯೆ:- ದೈ.ಶಿ.ವಿ/ 834 /2022-23 ದಿನಾಂಕ:-24.02.2023

## ಪತ್ರಿಕಾ ಪ್ರಕಟಣೆ

ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದಲ್ಲಿ ವಿವಿಧ ಕ್ರೀಡೆಗೆ ಸಂಬಂಧಿಸಿದ ಮೂಲ ಸೌಲಭ್ಯಗಳು ಲಭ್ಯವಿದ್ದು, ಸದರಿ ಕ್ರೀಡಾ ಸೌಲಭ್ಯಗಳನ್ನು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹಾಗೂ ಎಲ್ಲಾ ವಯೋಮಿತಿಯ ಶಾಲ ಮಕ್ಕಳುಗಳು ಹಾಗೂ ಸಾರ್ವಜನಿಕರು ತಮ್ಮ ದೈಹಿಕ ಸಾಮರ್ಥ್ಯವನ್ನು ಹಾಗೂ ಆರೋಗ್ಯವನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸಿಕೊಳ್ಳುತ್ತಿದ್ದಾರೆ.

ದೈಹಿಕ ಶಿಕ್ಷಣ ವಿಭಾಗದಲ್ಲಿ ವಿವಿಧ ಕ್ರೀಡೆಗಳಿಗೆ ಸಂಬಂಧಿಸಿದ ತರಬೇತುದಾರರಿದ್ದು, ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಹಾಗೂ ಶಾಲಾ ಮಕ್ಕಳುಗಳು ವರ್ಷವಿಡೀ ತರಬೇತಿಯನ್ನು ಪಡೆದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹಾಗೂ ಮೈಸೂರು ಜಿಲ್ಲೆ, ಕರ್ನಾಟಕ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿ ವಿಶ್ವವಿದ್ಯಾನಿಲಯಕ್ಕೆ ಗೌರವವನ್ನು ತಂದುಕೊಟ್ಟಿರುತ್ತಾರೆ.

ತರಬೇತಿಯಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳ ಕ್ರೀಡಾ ಗುಣಮಟ್ಟವನ್ನು (Enhancment of Sports Performance) ಹೆಚ್ಚಿಸುವ ತರಬೇತಿ ಕಾರ್ಯಕ್ರಮದಲ್ಲಿ ಕ್ರೀಡಾ ವಿದ್ಯಾರ್ಥಿಗಳಿಗೆ ಸರಿಯಾದ ಮಾರ್ಗದರ್ಶನ ಹಾಗೂ ಕ್ರೀಡೆಯಿಂದ ದೂರವಾಗದಂತೆ ನೋಡಿಕೊಳ್ಳುವ ಸಲುವಾಗಿ ದೈಹಿಕ ಶಿಕ್ಷಣ ವಿಭಾಗ ಹಾಗೂ GC's Sports Medicine Center & Multispeciality Hospital, Mysuru. ಇವರ ಸಂಯುಕ್ತ ಆಶ್ರಯದಲ್ಲಿ **ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗ, ಸ್ಪೋಟ್ಸ್ ಪೆವಿಲಿಯನ್ ಇಲ್ಲಿ ದಿನಾಂಕ:-28.02.2023ರಂದು ಸಂಜೆ:-4.00 ಗಂಟೆಗೆ "ಕ್ರೀಡೆಗಳಲ್ಲಿ ಆಗುವ ಗಾಯಗಳು, ಕ್ರೀಡಾ ಗಾಯಗಳು ಆಗದಂತೆ ತಡೆಗಟ್ಟುವಿಕೆ ಹಾಗೂ ಕ್ರೀಡಾ ಪಟುಗಳ ಪುನಶ್ಚೇತನ" ಎಂಬ ವಿಷಯದ ಕುರಿತು** ವಿಚಾರ ಸಂಕೀರ್ಣ ಕಾರ್ಯಕ್ರಮವನ್ನು **ಡಾ.ಗಿರೀಶ್‌ಚಂದ್ರ, ಆರ್., Medicle Director, GC's Sports Medicine Center & Multispeciality Hospital, Mysuru.** ಇವರು ನಡೆಸಿಕೊಡಲಿದ್ದು, ಕಾರ್ಯಕ್ರಮದಲ್ಲಿ ವಿವಿಧ ಕ್ರೀಡೆಗಳ 150 ಕ್ರೀಡಾಪಟುಗಳು, 30 ವಿವಿಧ ಕ್ರೀಡೆಗಳ ತರಬೇತುದಾರರು ಭಾಗವಹಿಸಲ್ಲಿದ್ದು ಇದರ ಪ್ರಯೋಜನವನ್ನು ಪಡೆಯಲ್ಲಿದ್ದಾರೆ.

**ಮೇಲಿನ ವಿಷಯವನ್ನು ತಮ್ಮ ಪ್ರತಿಷ್ಠಿತ ದಿನಪತ್ರಿಕೆಯಲ್ಲಿ ಪ್ರಕಟಿಸಿ ಸಹಕರಿಸಲು ಕೋರಲಾಗಿದೆ.**

24/2/2023

ನಿರ್ದೇಶಕರು

ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570005

ಗೆ,

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ,
ಮೈಸೂರು